## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1973 |
| ಉತ್ತರಿಸುವ ದಿನಾಂಕ | 16-03-2022 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕನಿಷ್ಠ ಎಷ್ಟು ಗುಂಟೆ ಕೃಷಿ ಜಮೀನನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೋಂದಣಿ ಮಾಡಲು ಅವಕಾಶ ಇದೆ; (ಆದೇಶಗಳ ಪ್ರತಿ ಇದ್ದಲ್ಲಿ ನೀಡುವುದು) | ನೋಂದಣಿ ಕಾಯ್ದೆ, 1908 ಹಾಗೂ ಕರ್ನಾಟಕ ನೋಂದಣಿ ನಿಯಮಗಳು 1965ರನ್ವಯ ಕೃಷಿ ಜಮೀನಿನ ಕನಿಷ್ಠ ವಿಸ್ತೀರ್ಣದ ಕುರಿತಂತೆ ನೋಂದಣಿಗೆ ಯಾವುದೇ ನಿರ್ಬಂಧವಿರುವುದಿಲ್ಲ. |
| ಆ | ಕೃಷಿ ಜಮೀನಿನ ಗುಂಟಾ ಖರೀದಿಯನ್ನು ಸರ್ಕಾರ ನಿರ್ಭಂದಿಸಿದ್ದರೂ ಕೂಡ ಕೃಷಿ ಜಮೀನಿನ ಗುಂಟಾ ಖರೀದಿಯು ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಲ್ಲೆಲ್ಲಿ ಈ ತರಹದ ಪ್ರಕರಣಗಳು ನಡೆದಿವೆ ಮತ್ತು ಅಕ್ರಮವಾಗಿ ನೋಂದಣಿ ಮಾಡಿಸಿದ ಸಬ್ ರಿಜಿಸ್ಟಾರ್‌ಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಇಲಾಖೆಯ ಕಾವೇರಿ ತಂತ್ರಾಂಶವನ್ನು ಭೂಮಿ ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದ್ದು, ಕೃಷಿ ಜಮೀನುಗಳ ಮಾಹಿತಿಯನ್ನು ಭೂಮಿ ತಂತ್ರಾಂಶದಿಂದ ಪಡೆದು ದಸ್ತಾವೇಜುಗಳನ್ನು ಉಪ ನೋಂದಣಾಧಿಕಾರಿಗಳು ನಿಯಮಾನುಸಾರ ನೋಂದಾಯಿಸುತ್ತಿದ್ದಾರೆ.<br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಕೃಷಿ ಜಮೀನಿನ ಗುಂಟಾ ಖರೀದಿಗೆ ಸಂಬಂಧಿಸಿದ ದಸ್ತಾವೇಜುಗಳ ನೋಂದಣಿಯನ್ನು ನಿರ್ಬಂಧಿಸಿರುವುದಿಲ್ಲ. |
| ಇ | ವಿಜಯಪುರ ಸಬ್-ರಿಜಿಸ್ಟಾರ್ ಕಛೇರಿಯಲ್ಲಿ ಅಕ್ರಮವಾಗಿ ಕೃಷಿ ಜಮೀನಿನ ಗುಂಟಾ ಖರೀದಿಯು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು; | ವಿಜಯಪುರ ಉಪ ನೋಂದಣಿ ಕಛೇರಿಯಲ್ಲಿ ಕೃಷಿ ಜಮೀನುಗಳ ನೋಂದಣಿಯನ್ನು ನಿಯಮಾನುಸಾರ ನೋಂದಾಯಿಸಲಾಗುತ್ತಿದ್ದು, ಯಾವುದೇ ಕೃಷಿ ಜಮೀನಿನ ಗುಂಟಾ ಖರೀದಿಯು ಅಕ್ರಮವಾಗಿ ನಡೆದಿರುವುದಿಲ್ಲ. |
| ಈ | ವಿಜಯಪುರ ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ಅಕ್ರಮವಾಗಿ ಗುಂಟಾ ಖರೀದಿ ಹಾಗೂ ಅವ್ಯವಹಾರಗಳ ಕುರಿತು ಅನೇಕ ದೂರುಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತಪ್ಪು ಮಾಡಿದ ಅಧಿಕಾರಿಯ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? | ವಿಜಯಪುರ ಉಪ ನೋಂದಣಿ ಕಛೇರಿಯಲ್ಲಿ ಅಕ್ರಮವಾಗಿ ಗುಂಟಾ ಖರೀದಿ ಹಾಗೂ ಅವ್ಯವಹಾರಗಳ ಕುರಿತು ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. |

ಸಂಖ್ಯೆ: ಕಂಇ/153/ಎಂಎನ್‌ಎಸ್‌ಎ/2022

(ಆರ್.ಅಶೋಕ)
ಕಂದಾಯ ಸಚಿವರು